ನಕ್ಕುಬಿಡಿ



## ಮುನ್ನೆಚ್ಚರಿಕೆ

ಮಹಿಳಾ ಉದ್ಯೋಗಿಗಳಿಗಾಗಿ, ಕಾರ್ಖಾನೆಯ ಸುರಕ್ಷಾ ಫಲಕದ ಸೂಚನೆಯೊಂದು ಹೀಗಿದೆ:

ನೀವು ಧರಿಸುವ ಸ್ಕರ್ಟ್ ಉದ್ದವಾಗಿದ್ದರೆ ಎಂಜಿನ್‌ಗಳ ಬಳಿ ಹುಷಾರಾಗಿರಿ ಮತ್ತು ಅದು ಗಿಡ್ಡವಾಗಿದ್ದರೆ ಎಂಜಿನಿಯರ್‌ಗಳ ಬಳಿ ಎಚ್ಚರದಿಂದಿರಿ.

★★★

## ಅರಿವಾದಾಗ..!

ಹುಡುಗಿ: ನಾವೆಲ್ಲಿಗೆ ಹೋಗುತ್ತಿದ್ದೇವೆ?

ಹುಡುಗ: ಲಾಂಗ್ ಡ್ರೈವ್‌ಗೆ....!

ಹುಡುಗಿ: ಮೊದಲೇ ಏಕೆ ತಿಳಿಸಲಿಲ್ಲ?

ಹುಡುಗ: ನನಗೂ ಈಗಷ್ಟೇ ತಿಳಿಯಿತು.... ಎಷ್ಟು ಅದುಮಿದರೂ ಬ್ರೇಕ್ ಹಿಡಿಯುತ್ತಿಲ್ಲ!

★★★

## ಊಟ ರೆಡಿ

ಗ್ರಾಹಕ: ಅಷ್ಟೊತ್ತಿನಿಂದ ಕಾಯುತ್ತಿರುವೆ. ಇನ್ನೂ ಊಟ ತಯಾರಾಗಿಲ್ಲವೆ?

ವೈಟರ್: ಊಟವೇನೋ ನಿನ್ನೇನೇ ತಯಾರಾಗಿದೆ ಸಾರ್.. ಆದರೆ ಬಿಸಿ ಮಾಡಲು ಗ್ಯಾಸ್ ಹೊಂದಿಸುವಷ್ಟರಲ್ಲಿ ತಡವಾಯಿತು..!

★★★

ಮಾಲ: ಇನ್ನು ಮುಂದೆ ನನ್ನ ಗಂಡನ ಜೊತೆ ಇಂಗ್ಲಿಷ್ ಸಿನಿಮಾಗಳನ್ನು ನೋಡೋಕೆ ನಾನು ಹೋಗೋದಿಲ್ಲ.

ಶೀಲ: ಯಾಕೆ?

ಮಾಲ: ಅವರ ತಾಯಿಯ ಬಗ್ಗೆ ಹೇಳೋಕೆ ಶುರು ಮಾಡಿದರೆ ಅರ್ಧ ಹೇಳುವುದರಲ್ಲೇ ಸಿನಿಮಾ ಮುಗೀತದೆ ಕಣೆ.

★★★

ಶ್ರೀಧರ್: ಒಂದು ವಾರದಿಂದ ಗಂಟಲು ನೋವಿನಿಂದ ನರಳುತ್ತಿರುವುದರಿಂದ ಕರಾಟೆ ಕ್ಲಾಸಿಗೆ ಹೋಗಲಿಲ್ಲ ಗುರೂ.

ಸತೀಶ್: ಗಂಟಲು ನೋವಿಗೂ ಕರಾಟೆ ಕಲಿಕೆಗೂ ಏನು ಸಂಬಂಧ.

ಶ್ರೀಧರ್: 'ಹಾ... ಹೂ... ಹಾ... ಹೂ...' ಅಂತ ಕಿರುಚಾಡಿ ಕೈಕಾಲನ್ನು ಜಾಡಿಸಬೇಕಲ್ಲ.

(ಸಂಗ್ರಹ) ಡಾ.ವಿ. ಪುಗಳೇಂದಿ, ಬಳ್ಳಾರಿ



## ಎದಿರೇಟು

ಪತಿ: ನಿನ್ನೆ ನನ್ ಕನಸಿನಲ್ಲಿ ಓರ್ವ ಸುಂದರ ಯುವತಿ ಬಂದಿದ್ದಳು....

ಪತ್ನಿ: ಆಕೆ ಒಬ್ಬಳೇ ಬಂದಿದ್ದಳು ತಾನೆ?

ಪತಿ: ಹೌದು, ನಿನಗೆ ಹೇಗೆ ತಿಳಿಯಿತು?

ಪತ್ನಿ: ಏಕೆಂದರೆ ಅವಳ ಪತಿ ನನ್ನ ಕನಸಲ್ಲಿ ಬಂದಿದ್ದರು!

★★★

## ಯಾರಿಗೆ?

ಸರ್ಕಸ್‌ನಲ್ಲಿ ಕನ್ಯೆಯೋರ್ವಳು ಸಿಂಹಕ್ಕೆ ಮುತ್ತು ನೀಡುತ್ತಾಳೆ ಮತ್ತು ರಿಂಗ್ ಮಾಸ್ಟರ್ ಪ್ರೇಕ್ಷಕರನ್ನುದ್ದೇಶಿಸಿ ಸವಾಲು ಹಾಕುತ್ತಾನೆ. 'ನಿಮ್ಮಲ್ಲಿ ಯಾರಿಗಾದರೂ ಹೀಗೆ ಮುತ್ತನ್ನೀಯುವ ಗುಂಡಿಗೆ ಇದೆಯೇ?

ಸಂತಾ: ನಿಶ್ಚಯವಾಗಿಯೂ ನಾನು ನೀಡಬಲ್ಲೆ... ಮೊದಲು ಆ ಸಿಂಹವನ್ನು ಅಲ್ಲಿಂದ ಹಿಂದಕ್ಕೋಡಿಸಿ....!

(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ಎಂಥಾ ಕಾಲ ಬಂತಯ್ಯ?

ಓರ್ವ ಗಂಡು, ಹೆಣ್ಣಿನೊಡನೆ 'ಡರ್ಟಿ' ಮಾತನಾಡಿದರೆ ಲೈಂಗಿಕ ದೌರ್ಜನ್ಯ ಅಂತಾರೆ; ಅದೇ ಒಂದು ಹೆಣ್ಣು ಗಂಡಿನೊಡನೆ 'ಡರ್ಟಿ' ಮಾತನಾಡಿದರೆ ನಿಮಿಷಕ್ಕೆ ಇಂತಿಷ್ಟು ರೂಪಾಯಿ ಅಂತ ಮೊಬೈಲ್ ಕಂಪೆನಿಯವರು ಚಾರ್ಜ್ ಮಾಡ್ತಿರ್‍ತಾರೆ!

★★★

## 'ಪೂರ್' ಮಮ್ಮಿ

ತನ್ನ ಮನೆಯ ಗೃಹಪ್ರವೇಶಕ್ಕೆ ರಜೆ ಪಡೆದು ನಂತರ ಶಾಲೆಗೆ ಹಿಂತಿರುಗಿ ಬಂದಿದ್ದ ಬಂಟಾಗೆ ಮಾಸ್ತರು, ನಿಮ್ಮ ಹೊಸಮನೆ ಹೇಗಿದೆಯೋ ಪುಟ್ಟ? ಎಂದು ಕೇಳಿದರು.

ಬಂಟಾ: 'ಎಕ್ಸಲೆಂಟ್ ಸರ್, ನನಗೊಂದು ರೂಮಿದೆ, ನನ್ನಕ್ಕನಿಗೊಂದು ರೂಮಿದೆ. ನಮ್ಮಣ್ಣನಿಗೂ ಒಂದು ಸಪರೇಟ್ ರೂಮಿದೆ. ಆದರೆ ಪೂರ್ ಮಮ್ಮಿಗೆ ಸಪರೇಟ್ ರೂಮಿಲ್ಲ ಸರ್. ಪಾಪ ಆಕೆ ಡ್ಯಾಡ್ ರೂಮಿನಲ್ಲೇ ಮಲಕ್ಕೋಬೇಕು!

(ಸಂಗ್ರಹ) ಎಸ್. ವಿಶ್ವನಾಥ, ಮಂಡ್ಯ